## ಡಾ. ಬಾಬಾಸಾಹೇಬ ಅಂಬೇಡ್ಕರ 133ನೇ ಜನ್ಮ ದಿನಾಚರಣೆ

# ಸರ್ವರಿಗೂ ಸಮಾನ ಹಕ್ಕು ಕಲ್ಪಿಸಿದ ಕೀರ್ತಿ ಡಾ. ಬಾಬಾಸಾಹೇಬ ಅಂಬೇಡ್ಕರ್ ಅವರಿಗೆ ಸಲ್ಲುತ್ತದೆ: ಡಾ.ಪ್ರವೀಣಾ





ಬೆಳಗಾವಿ, ಏ.: ಡಾ. ಬಾಬಾಸಾಹೇಬ್ ಅಂಬೇಡ್ಕರ ಅವರು ಭಾರತದ ಕಾನೂನು ಸುವ್ಯವಸ್ಥೆ, ಅಸ್ಪೃಶ್ಯತೆ ನಿವಾರಣೆ, ಪ್ರಜೆಗಳ ಮೂಲಭೂತ ಕರ್ತವ್ಯ, ಸಮಾನತೆ, ಶಿಕ್ಷಣ ಕ್ಷೇತ್ರ ಸೇರಿದಂತೆ ಹಲವು ಕ್ಷೇತ್ರಗಳಿಗೆ ತಮ್ಮದೇಯಾದ ಕೊಡುಗೆಯನ್ನು ನೀಡುವುದರ ಮೂಲಕ ದೇಶ ಕಂಡ ಮಹಾನ್ ನಾಯಕರಾಗಿ ವಿಶ್ವ ಮಾನವ ಸಂದೇಶ ಸಾರಿದ ಮೊದಲ ವ್ಯಕ್ತಿಯಾಗಿದ್ದಾರೆ ಎಂದು ಕಡೋಲಿ ಸರ್ಕಾರಿ ಪ್ರೌಢ ಶಾಲಾ ಸಹ ಶಿಕ್ಷಕಿ ಡಾ. ಪ್ರವೀಣಾ ಕೆ.ಎಸ್ ಅವರು ತಿಳಿಸಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಮಹಾನಗರ ಪಾಲಿಕೆ, ಹಾಗೂ ಸಮಾಜ ಕಲ್ಯಾಣ ಇಲಾಖೆಯ ಸಂಯುಕ್ತಾಶ್ರಯದಲ್ಲಿ ಡಾ. ಬಾಬಾಸಾಹೇಬ ಅಂಬೇಡ್ಕರ ಉದ್ಯಾನದಲ್ಲಿ ರವಿವಾರ (ಏ.14) ನಡೆದ ಡಾ. ಬಾಬಾಸಾಹೇಬ ಅಂಬೇಡ್ಕರ ಜಯಂತಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಭಾರತೀಯ ಸಂವಿಧಾನದ ಪಿತಾಮಹ ಎಂದು ಪ್ರಸಿದ್ಧರಾದ ಡಾ. ಬಿ.ಆರ್ ಅಂಬೇಡ್ಕರ್ ಅವರು ಭಾರತೀಯ ಇತಿಹಾಸದಲ್ಲಿ ಒಂದು ಸ್ಮಾರಕ ವ್ಯಕ್ತಿ. ಅವರು ಭಾರತದ ಸಂವಿಧಾನವನ್ನು ರೂಪಿಸಿ ಕೆಳ ಸಮುದಾಯಗಳ ಪ್ರಗತಿಗೆ ಶ್ರಮಿಸಿದ್ದಾರೆ. ಭಾರತದಲ್ಲಿನ ದೀನದಲಿತ ಜಾತಿಗಳಿಗೆ ಸಮಾನತೆ ಮತ್ತು ಸಾಮಾಜಿಕ ನ್ಯಾಯಕ್ಕಾಗಿ ತಮ್ಮ ಜೀವಿತಾವಧಿಯನ್ನು ಕೊಡುಗೆಯಾಗಿ ನೀಡಿದ್ದಾರೆ ಎಂದು ತಿಳಿಸಿದರು.

ಅಸಮಾನತೆಯನ್ನು ಹೋಗಲಾಡಿಸಲು ಸಂವಿಧಾನ ಗ್ರಂಥ ರಚಿಸಿ ತಮ್ಮ ಛಾಪು ಜಗತ್ತಿಗೆ ಪರಿಚಯಿಸಿದ್ದಾರೆ. ದೇಶದಲ್ಲಿ ಕಾನೂನು ಬರೆದು, ಪುಸ್ತಕ ಹಿಡಿದು ಪಾರ್ಲಿಮೆಂಟ್ ಗೆ ಹೆಜ್ಜೆ ಇಟ್ಟ ಕೆಳ ಸಮುದಾಯಗಳ ಮೊದಲ ಸಾಧಕರು ಡಾ.ಬಾಬಾ ಸಾಹೇಬ ಅಂಬೇಡ್ಕರ್. ಶೋಷಿತ ಜನಾಂಗದ ಸಂಕೇತವಾಗಿ ಮಾತ್ರ ಅವರನ್ನು ಬಿಂಬಿಸಲಾಗುತ್ತಿದೆ ಅವರು ಸರ್ವರಿಗೂ ಸಮಾನ ಹಕ್ಕು ನೀಡಿದ್ದಾರೆ.

ಮಹಿಳಾ ಸಬಲೀಕರಣ, ಸಾಮಾಜಿಕ ಸುಧಾರಣೆ ಜೀವನ ಜೀವನ ಮುಡಿಪಾಗಿಟ್ಟಿದ್ದರು. ಕಲ್ಲಿದ್ದಲು ಗಣಿಗಳಲ್ಲಿ ದುಡಿಯುವ ಕಾರ್ಮಿಕರ ಆರೋಗ್ಯ, ಚಿಕಿತ್ಸೆ, ವೇತನ ಎಲ್ಲವನ್ನೂ ಆಳವಾಗಿ ಅಧ್ಯಯನ ಮಾಡಿ, ಕಾರ್ಮಿಕರಿಗೆ ಕನಿಷ್ಠ ವೇತನ, ಜೀವನ ವಿಮೆ ಜಾರಿಗೆ ತಂದರು.

ಕಾನೂನು ಚೌಕಟ್ಟಿನಲ್ಲಿ ಮಹಿಳಾ ಹಕ್ಕುಗಳನ್ನು ಕಾಯ್ದಿರಿಸಿ ಮಹಿಳೆಯರಿಗೆ ಸಮಾನತೆ ಕಲ್ಪಿಸಿದರು. ಮಹಿಳೆಯರಿಗೆ ಶಿಕ್ಷಣ, ಉದ್ಯೋಗ ಮೀಸಲಾತಿ ತಂದರು. ಅದರಂತೆ

ಕೃಷಿ, ಕೈಗಾರಿಕೆಯಿಂದ ಜನರು ಆರ್ಥಿಕ ಅಭಿವೃದ್ಧಿ ಹೊಂದಲು ದೇಶದ ಹಿತ ದೃಷ್ಟಿಯಿಂದ ಉತ್ತರ ಭಾರತದಲ್ಲಿ ಅಣೆಕಟ್ಟುಗಳನ್ನು ನಿರ್ಮಾಣ ಮಾಡಿ ಕೊಟ್ಟಿದ್ದಾರೆ ಎಂದು ಹೇಳಿದರು.

" ಒಬ್ಬ ವಿದ್ಯಾವಂತ ಪಡೆದ ಶಿಕ್ಷಣವು ಬಡವರ ಕಲ್ಯಾಣಕ್ಕೆ ಹಾನಿಕಾರಕವಾಗಿದ್ದರೆ, ಆ ವಿದ್ಯಾವಂತ ಮನುಷ್ಯ ಸಮಾಜಕ್ಕೆ ಶಾಪವಿದ್ದಂತೆ"

"ನಿಮ್ಮ ಮಕ್ಕಳಿಗೆ ಧಾರ್ಮಿಕತೆಯನ್ನು ಬೋಧಿಸಬೇಡಿ. ಅವರು ಮೂಢನಂಬಿಕೆಯ ಗುಲಾಮರಾಗುತ್ತಾರೆ. ಅವರಿಗೆ ಶಿಕ್ಷಣ ಕೊಡಿ, ಗುಲಾಮಗಿರಿಯನ್ನು ಮೆಟ್ಟಿ ನಿಲ್ಲುತ್ತಾರೆ" ಎಂಬ ಅವರು ಗಟ್ಟಿ ಮಾತುಗಳಿಂದ ತಳ ಸಮುದಾಯ ಶಿಕ್ಷಣ ಕ್ಷೇತ್ರಗಳಲ್ಲಿ ಸಾಕಷ್ಟು ಮುಂದುವರೆಯಲು ಸಹಾಯವಾಯಿತು.ಪುಸ್ತಕ, ಜ್ಞಾನದ ಮಾರ್ಗದಲ್ಲಿ ಯುವ ಪೀಳಿಗೆ ನಡೆಯಬೇಕು ಎಂದು ಉಪನ್ಯಾಸಕಿ ಡಾ. ಪ್ರವೀಣಾ ಕೆ.ಎಸ್ ಅವರು ಉಪನ್ಯಾಸದಲ್ಲಿ ತಿಳಿಸಿದರು.

ಡಾ.ಬಿ.ಆರ್ ಅಂಬೇಡ್ಕರ ಅವರ ಜನ್ಮ ದಿನಾಚರಣೆ ದೇಶಕ್ಕೆ ಹಬ್ಬವಿದ್ದಂತೆ. ಭಾರತ ಇಷ್ಟು ಪ್ರಗತಿಪರ ರಾಷ್ಟ್ರಗಳು ಮೂಲ ಕಾರಣ ಡಾ. ಬಿ.ಆರ್. ಅಂಬೇಡ್ಕರ್ ಅವರು. ಬ್ರಿಟಿಷ್ ರಿಂದ ಸ್ವಾತಂತ್ರ್ಯ ಸಿಕ್ಕ ಬಳಿಕ, ಸಾಮಾಜಿಕ ,ಆರ್ಥಿಕ, ರಾಜಕೀಯವಾಗಿ ನ್ಯಾಯ ಸಿಗಲು ಸಂವಿಧಾನ ಗ್ರಂಥ ರಚನೆಯ ಮೂಲಕ ಮೂಲ ಭೂತ ಹಕ್ಕು ಒದಗಿಸಿದ್ದಾರೆ ಎಂದು ಜಿಲ್ಲಾಧಿಕಾರಿ ನಿತೇಶ್ ಪಾಟೀಲ ಅವರು ತಿಳಿಸಿದರು.

ಮಹಿಳೆಯರಿಗೆ ಮತದಾನ, ಯಾವುದೇ ವೃತ್ತಿ ಆಯ್ಕೆ, ಚುನಾವಣಾ ಪ್ರಕ್ರಿಯೆ ಸೇರಿದಂತೆ ಎಲ್ಲರಿಗೂ ಸಮಾನ ಅವಕಾಶ ಕಪಿಸುವ ನಿಟ್ಟಿನಲ್ಲಿ ಸಂವಿಧಾನ ರಚನೆ ಮಾಡಿದ್ದಾರೆ. ವಿಶ್ವದ ನೂರಾರು ದೇಶಗಳು ಭಾರತ ದೇಶದ ಸಂವಿಧಾನವನ್ನು ತಮ್ಮ ದೇಶಗಳಲ್ಲಿ ಅಳವಡಿಸಿಕೊಳ್ಳುತ್ತಿದ್ದಾರೆ. ಪ್ರತಿಯೊಬ್ಬ ವ್ಯಕ್ತಿಗೆ ಮತದಾನ ಹಕ್ಕು, ಪ್ರತಿ ಪ್ರಜೆಯು ತಮ್ಮ ನಾಯಕನನ್ನು ಆಯ್ಕೆ ಮಾಡಲು ಅವಕಾಶ ನೀಡಿದ್ದಾರೆ.

ಮುಂದಿನ ದಿನಗಳಲ್ಲಿ ಭಾರತ ದೇಶ ಇನ್ನೂ ಪ್ರಗತಿಪರ ರಾಷ್ಟ್ರವಾಗಲಿದೆ ಅದಕ್ಕೆ ಅಡಿಪಾಯ ಅಂಬೇಡ್ಕರ್ ಅವರು ಹಾಕಿ ಕಟ್ಟಿದ್ದಾರೆ. ಅವರ ಆಸ್ತಿ ಜ್ಞಾನ ಹಾಗೂ ಪುಸ್ತಕ ಭಂಡಾರ ಅದರಂತೆ ನಿಮ್ಮ ಮಕ್ಕಳಿಗೆ ಉತ್ತಮ ಶಿಕ್ಷಣ ನೀಡುವುದರ ಮೂಲಕ ದೇಶಕ್ಕೆ ಆಸ್ತಿಯನ್ನಾಗಿ ಮಾಡಿರಿ ಎಂದು ಜಿಲ್ಲಾಧಿಕಾರಿ ನಿತೇಶ್ ಪಾಟೀಲ ಅವರು ತಿಳಿಸಿದರು.

**ಸಂವಿಧಾನ ಪೀಠಿಕೆ ಬೋಧನೆ:**

ವೇದಿಕೆ ಕಾರ್ಯಕ್ರಮ ಪ್ರಾರಂಭಕ್ಕೂ ಜಿಲ್ಲಾಧಿಕಾರಿ ನಿತೇಶ್ ಪಾಟೀಲ ಅವರು ಸಂವಿಧಾನ ಪೀಠಿಕೆ ಭೋಧಿಸಿದರು.

**ವಿದ್ಯಾರ್ಥಿಗಳಿಗೆ ಸನ್ಮಾನ:**

ಕಾರ್ಯಕ್ರಮದ ಕೊನೆಯಲ್ಲಿ ಜಿಲ್ಲೆಯಲ್ಲಿ ಎಸ್.ಎಸ್.ಎಲ್.ಸಿ ಯಲ್ಲಿ ಅತಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಸನ್ಮಾನಿಸಲಾಯಿತು.

ನಗರ ಪೊಲೀಸ್ ಆಯುಕ್ತ ಯಡಾ ಮಾರ್ಟಿನ್ ಮಾರ್ಬನ್ಯಾಂಗ್, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಕಾಧಿಕಾರಿ ರಾಹುಲ ಶಿಂಧೆ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಭೀಮಾಶಂಕರ ಗುಳೇದ, ರಾಣಿ ಚನ್ನಮ್ಮ ವಿಶ್ವ ವಿದ್ಯಾಲಯದ ರಿಜಿಸ್ಟರ್ ರಾಜಶ್ರೀ ಜೈನಾಪುರ, ಮಹಾನಗರ ಪಾಲಿಕೆ ಆಯುಕ್ತ ಲೋಕೇಶ್, ಸಮಾಜ ಕಲ್ಯಾಣ ಜಂಟಿ ನಿರ್ದೇಶಕ ನವೀನ ಶಿಂತ್ರೆ, ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿ ಬಸವರಾಜ ಕುರಿಹುಲಿ, ಅಂಗವಿಕಲರ ಕಲ್ಯಾಣಾಧಿಕಾರಿ ನಾಮದೇವ ಬಿಲ್ಕಾರ್, ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿ ಶಿವಪ್ರಿಯ ಕಡೆಚೂರು, ಸಮಾಜದ ಮುಖಂಡರಾದ ಮಲ್ಲೇಶ ಚೌಗಲಾ, ಮಹಾದೇವ ತಳವಾರ, ಯಲ್ಲಪ್ಪ ಹುದಲಿ, ಸೇರದಂತೆ ವಿವಿಧ ಇಲಾಖೆಯ ಅಧಿಕಾರಿ ಸಿಬ್ಬಂದಿಗಳು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು. ಜಿಲ್ಲೆಯಿಂದ ಆಗಮಿಸಿದ ಸಾವಿರಾರು ಜನರು ಪಾಲ್ಗೊಂಡಿದ್ದರು.

**ಮೆರವಣಿಗೆ ಕಾರ್ಯಕ್ರಮ:**

ಇದಕ್ಕೂ ಮೊದಲು ಜಿಲ್ಲಾಧಿಕಾರಿ ನಿತೇಶ್ ಪಾಟೀಲ, ಪೊಲೀಸ್ ಆಯುಕ್ತ ಯಡಾ ಮಾರ್ಟಿನ್ ಮಾರ್ಬನ್ಯಾಂಗ್, ಜಿಲ್ಲಾ ಪಂಚಾಯತಿ ಸಿಇಓ ರಾಹುಲ್ ಶಿಂಧೆ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಭೀಮಾಶಂಕರ ಗುಳೇದ ಅವರು ಸದಾಶಿವ ನಗರದ ಬುದ್ಧವಿಹಾರದ ಆವರಣದಲ್ಲಿರುವ ಡಾ.ಅಂಬೇಡ್ಕರ್ ಅವರ ಪುತ್ಥಳಿಗೆ ಮಾಲಾರ್ಪಣೆ ಮಾಡಿದರು. ಬಳಿಕ ಧರ್ಮವೀರ ಸಂಭಾಜಿ ವೃತ್ತದಿಂದ ಡಾ. ಬಿ.ಆರ್. ಅಂಬೇಡ್ಕರ್ ಅವರ ಭಾವಚಿತ್ರದ ಭವ್ಯ ಮೆರವಣಿಗೆ ನಡೆಯಿತು.

ಈ ಸಂದರ್ಭದಲ್ಲಿ ಜಿಲ್ಲಾಧಿಕಾರಿ ನಿತೇಶ್ ಪಾಟೀಲ, ಪೊಲೀಸ್ ಆಯುಕ್ತ ಯಡಾ ಮಾರ್ಟಿನ್ ಮಾರ್ಬನ್ಯಾಂಗ್, ಜಿಲ್ಲಾ ಪಂಚಾಯತಿ ಸಿಇಓ ರಾಹುಲ್ ಶಿಂಧೆ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಭೀಮಾಶಂಕರ ಗುಳೇದ ಮಹಾನಗರ ಪಾಲಿಕೆ ಆಯುಕ್ತರಾದ ಪಿ.ಎನ್.ಲೋಕೇಶ್, ಸಮಾಜ ಕಲ್ಯಾಣ ಇಲಾಖೆಯ ಜಂಟಿ ನಿರ್ದೇಶಕ ನವೀನ್ ಶಿಂತ್ರೆ, ಸಮಾಜದ ಮುಖಂಡರಾದ ಮಲ್ಲೇಶ ಚೌಗಲಾ ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳು ಉಪಸ್ಥಿತರಿದ್ದರು.

# ಕರ್ನಾಟಕ ಗ್ರಾಮೀಣ ಬ್ಯಾಂಕ್‌ನಲ್ಲಿ 133ನೇ ಡಾ. ಬಿ ಆರ್ ಅಂಬೇಡ್ಕರ್ ಜಯಂತಿ ಆಚರಣೆ



ಬಳ್ಳಾರಿ ಏ : ಡಾ.ಬಿ.ಆರ್. ಅಂಬೇಡ್ಕರ್ ಅವರ 133ನೇ ಜನ್ಮ ದಿನಾಚರಣೆಯನ್ನು ಬಳ್ಳಾರಿಯ ಕರ್ನಾಟಕ ಗ್ರಾಮೀಣ ಬ್ಯಾಂಕ್‌ನ ಪ್ರಾದೇಶಿಕ ಕಚೇರಿಯಲ್ಲಿ ಸಂಭ್ರಮದಿಂದ ಆಚರಿಸಲಾಯಿತು. ಈ ಕಾರ್ಯಕ್ರಮವು ಪ್ರಧಾನ ಕಚೇರಿ ಮತ್ತು ಪ್ರಾದೇಶಿಕ ಕಚೇರಿ, ಬಳ್ಳಾರಿಯ ಸಹಯೋಗ 'ದ ಪ್ರಯತ್ನವಾಗಿತ್ತು.

ಮಿಸ್ ಅರ್ಚನಾ ಪಾಟೀಲ್ ರವರ ಭಾವಪೂರ್ಣ ಪ್ರಾರ್ಥನ 'ಯೊಂದಿಗೆ ಕಾರ್ಯಕ್ರ ಮವು ಪ್ರಾರಂಭವಾಯಿತು. ಸಹಾಯಕ ಪ್ರಧಾನ ವ್ಯವಸ್ಥಾಪಕರಾದ ಎಚ್ ಕೆ ಗಿರಡ್ಡಿ ಅವರು ತಮ್ಮ ಭಾಳಣದಲ್ಲಿ ಭಾಗವಹಿಸಿದ ಎಲ್ಲರಿಗೂ ಆತ್ಮೀಯ ಸ್ವಾಗತವನ್ನು ನೀಡಿದರು. ಮೇಘಾ ಎ ಎಸ್ ಅವರು ದಿನದ ಮುಖ್ಯ ಅತಿಥಿಗಳಾದ ಶ್ರೀ ಕೃಳ್ಣದೇವರಾಯ ವಿಶ್ವವಿದ್ಯಾಲಯದ ಖ್ಯಾತ ಪ್ರಾಧ್ಯಾಪಕರಾದ ಎಚ್ ತಿಪ್ಪೇಸ್ವಾಮಿ ಅವರನ್ನು ಪರಿಚಯಿಸಿದರು. ಕಾರ್ಯಕ್ರಮದ ಪ್ರಮುಖ ಅಂಶವೆಂದರೆ ಸಭಾಧ್ಯಕ್ಷ ದಿಲ್ಲಿಬಾಬು ಜಿ ಆರ್, ಮುಖ್ಯ ಅತಿಥಿಗಳ ನೇತೃತ್ವದಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಅವರಿಗೆ ಪುಳ್ಪನಮನ ಸಲ್ಲಿಸಿ ಬೆಳಗಿಸಿದ ಜ್ಯೋತಿಯು, ಡಾ. ಅಂಬೇಡ್ಕರ್ ಅವರು ಪ್ರತಿನಿಧಿಸುವ ಜ್ಞಾನ ಮತ್ತು ಸಮಾನತೆಯ ಜ್ಯೋತಿಯನ್ನು ಸಂಕೇತಿಸುವಂತಿತ್ತು.

ತಮ್ಮ ಭಾಳಣದಲ್ಲಿ ಮುಖ್ಯ ಅತಿಥಿಗಳಾದ ಹೆಚ್ ತಿಪ್ಪೇಸ್ವಾಮಿ ಅವರು ಡಾ. ಅಂಬೇಡ್ಕರ್ ಅವರ ನರಂತರ ಪರಂಪರೆ ಮತ್ತು ಭಾರತೀಯ ಸಮಾಜ, ಅರ್ಥವ್ಯವಸ್ಥೆ ಮತ್ತು ಸಂವಿಧಾನಕ್ಕೆ ಅವರ ಅವಿಸ್ಮರಣೀಯ ಕೊಡುಗೆಗಳನ್ನು ಪ್ರಸ್ತಾಪಿಸಿದರು. ಸಮಾರಂಭದಲ್ಲಿ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಬಹುಮಾನ ವಿತರಣೆ ಮಾಡುವುದರ ಮೂಲಕ ಶೈಕ್ಷಣಿಕ ಉತ್ಕೃಳ್ಟತೆಯನ್ನು ಗುರುತಿಸಿ, ಡಾ. ಅಂಬೇಡ್ಕರ್ ಅವರ ಬೋಧನೆಗಳ ಉತ್ಸಾಹದಲ್ಲಿ ಶಿಕ್ಷಣ ಮತ್ತು ಶ್ರೇಳ್ಠತೆಯ ಅನ್ವೇಳಣೆಯನ್ನು ಪ್ರೋತ್ಸಾಹಿಸಲಾಯಿತು.

ಕರ್ನಾಟಕ ಗ್ರಾಮೀಣ ಬ್ಯಾಂಕ್ ಎಸ್‌ಸಿಎಸ್‌ಟಿ ನೌಕರರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷರಾದ ಡಿ ಪಿ ಬೊಮ್ಮಯ್ಯ ಮತ್ತು ಪ್ರಧಾನ ಕಾರ್ಯದರ್ಶಿ ಎಚ್ ಚಂದ್ರಪ್ಪ ಅವರು ಸ್ಫೂರ್ತಿದಾಯಕ ಭಾಳಣ ಮಾಡಿದರು. ಅವರು ಒಳಗೊಳ್ಳುವಿಕೆಯ ಪ್ರಾಮುಖ್ಯತೆ ಮತ್ತು ಸಾಮಾಜಿಕ ಪ್ರಗತಿಯನ್ನು ಉತ್ತೇಜಿಸುವಲ್ಲಿ ಬ್ಯಾಂಕಿಂಗ್ ಕ್ಷೇತ್ರದ ಪಾತ್ರವನ್ನು ಎತ್ತಿ ತೋರಿಸಿದರು. ಎಂ ಗಾಂಧಿ, ಜನರಲ್ ಮ್ಯಾನೇಜರ್, ಮತ್ತು ಅಧ್ಯಕ್ಷ ದಿಲ್ಲಿಬಾಬು ಜಿ ಆರ್ ಅವರು ಸಭೆಯನ್ನುದ್ದೇಶಿಸಿ ಮಾತನಾಡಿ, ಡಾ. ಅಂಬೇಡ್ಕರ್ ಅವರ ಮೌಲ್ಯಗಳು ಮತ್ತು ತತ್ವಗಳನ್ನು ಎತ್ತಿಹಿಡಿಯಲು ಬ್ಯಾಂಕ್‌ನ ಬದ್ಧತೆಯನ್ನು ಪುನರುಚ್ಚರಿಸಿದರು.

ಸೂರ್ಯಕಾಂತ್ ಸಿಎಚ್ ರವರ ವಂದನಾರ್ಪಣೆಯೊಂದಿಗೆ ಕಾರ್ಯಕ್ರಮವು ಮುಕ್ತಾಯಗೊಂಡಿತು. ಅವರು ಮುಖ್ಯ ಕಛೇರಿ, ಪ್ರಾದೇಶಿಕ ಕಛೇರಿ, ಮತ್ತು ಶಾಖೆಗಳ ಸಿಬ್ಬಂದಿಗಳು ಹಾಗೂ ಕರ್ನಾಟಕ ಗ್ರಾಮೀಣ ಬ್ಯಾಂಕ್ ಎಸ್ಸಿ,ಎಸ್ಟಿ ನೌಕರರ ಕಲ್ಯಾಣ ಸಂಘ ಮತ್ತು ಬ್ಯಾಂಕಿನ ವಿವಿಧ ಕಾರ್ಮಿಕ ಸಂಘಗಳ ಸದಸ್ಯರು ಮತ್ತು ಪದಾಧಿಕಾರಿಗಳನ್ನು ಒಳಗೊಂಡ ಎಲ್ಲಾ ಭಾಗವಹಿಸಿದವರಿಗೆ ಮತ್ತು ಹಾಜರಿದ್ದವರಿಗೆ ಕೃತಜ್ಞತೆಗಳನ್ನು ಸಲ್ಲಿಸಿದರು.ಅರುಣಾಚಲರವರು ಕಾರ್ಯಕ್ರಮ ನರೂಪಿಸಿದರು.

ಕರ್ನಾಟಕ ಗ್ರಾಮೀಣ ಬ್ಯಾಂಕ್‌ನಲ್ಲಿ ನಡೆದ 133ನೇ ಡಾ.ಬಿ.ಆರ್. ಅಂಬೇಡ್ಕರ್ ಜಯಂತಿಯು ಮಹಾನ್ ನಾಯಕರ ಜನ್ಮ ದಿನಾಚರಣೆ ಮಾತ್ರವಲ್ಲದೆ ಸಾಮಾಜಿಕ ನ್ಯಾಯ ಮತ್ತು ಸಮಾನತೆಗೆ ಬ್ಯಾಂಕಿನ ಬದ್ಧತೆಯನ್ನು ಸೂಚಿಸುವಂತಿತ್ತು.

# ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಯಲ್ಲಿ ಶ್ರೀಚೈತನ್ಯ ಪದವಿ ಪೂರ್ವ ಸಮೂಹ ವಿದ್ಯಾ ಸಂಸ್ಥೆಗಳ್ಲ ವಿದ್ಯಾರ್ಥಿಗಳ ಅಮೋಘ ಸಾಧನೆ



ಬಳ್ಳಾರಿ ಏ :. 2023–24 ನೇ ಶೈಕ್ಷಣಿಕ ಸಾಲಿನಲ್ಲಿ ನಡೆದ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಯಲ್ಲಿ ಶ್ರೀಚೈತನ್ಯ ಪದವಿ ಪೂರ್ವ ಸಮೂಹ ವಿದ್ಯಾ ಸಂಸ್ಥೆಗಳ ಪಿಯುಸಿ ಫಲಿತಾಂಶದಲ್ಲಿ ಸೈಯದ್ ಪೈಝಾನ್ 593 ಅಂಕಗಳನ್ನು ಪಡೆದಿದ್ದಾರೆ. ಇವರ ಹಾಲ್ ಟಿಕೆಟ್ ನಂಬರ್ 20249426581, ಅನುಶ್ರೀ 591 ಅಂಕಗಳನ್ನು 20249323908, ಸಂಪದ ಸುರೇಶ್ ಮಲಗಂಡೆ, 589 ಹಾಲ್ ಟಿಕೆಟ್ ನಂಬರ್ 202493324211, ರಿಷಿಕ ಎಸ್ಬಿಂ 587 ಅಂಕಗಳು ಹಾಲ್ ಟಿಕೆಟ್ ನಂಬರ್ 20249263079, ಸಮರಿನ್ ಪಿ 586 ಅಂಕಗಳು ಹಾಲ್ ಟಿಕೆಟ್ ನಂಬರ್ 20249263019, ಕೀರ್ತನ ಎಸ್ 586 ಅಂಕಗಳು ಹಾಲ್ ಟಿಕೆಟ್ ನಂಬರ್ 20249255388, ಸಂತೋಳ್ ಕುಮಾರ್ 585 ಅಂಕಗಳು ಹಾಲ್ ಟಿಕೆಟ್ ನಂಬರ್ 20249241431, ಲಕ್ಷ್ಮಿ 585 ಅಂಕಗಳು ಹಾಲ್ ಟಿಕೆಟ್ ನಂಬರ್ 20249244838, ಪೂಜಿತ 584 ಅಂಕಗಳು 20249426119, ನಂದಿತಾ ಚಂದ್ರಶೇಖರ 584 ಅಂಕಗಳು ಹಾಲ್ ಟಿಕೆಟ್ ನಂಬರ್ 20249324099, ರಿಯಾ ಎ ಪವರ್ 584 ಅಂಕಗಳು 20249324189, ಅಶ್ವಿನ 584 ಅಂಕಗಳು ಹಾಲ್ ಟಿಕೆಟ್ ನಂಬರ್ 20249255733, ಅಭಿನವ್ 584 ಅಂಕಗಳು ಹಾಲ್ ಟಿಕೆಟ್ ನಂಬರ್ 20249241030, ವರ್ಷಿತ 583 ಅಂಕಗಳು ಹಾಲ್ ಟಿಕೆಟ್ ನಂಬರ್ 2024 9426680, ನತಿನ್ 583 ಅಂಕಗಳು ಹಾಲ್ ಟಿಕೆಟ್ ನಂಬರ್ 20249426055 ನಸರ್ಗ ಅಂಕಲಗಿ 583 ಅಂಕಗಳು ಹಾಲ್ ಟಿಕೆಟ್ ನಂಬರ್ 20249324113, ವೈಳ್ಣವಿ ದೇಶಪಾಂಡೆ 583 ಅಂಕಗಳು ಹಾಲ್ ಟಿಕೆಟ್ ನಂಬರ್ 20249324 324, ಸುದೀಪ್ ಪಾಟೀಲ್ 583 ಅಂಕಗಳು ಹಾಲ್ ಟಿಕೆಟ್ ನಂಬರ್ 20249242020, ಮಂದರಗಿ ಬನ್ನಿ ಶಂಕರ್ 583 ಅಂಕಗಳು ಹಾಲ್ ಟಿಕೆಟ್ ನಂಬರ್ 20249241647, ದೀಕ್ಷಿತ್ 583 ಅಂಕಗಳು ಹಾಲ್ ಟಿಕೆಟ್ ನಂಬರ್20249241829, ಪವಿತ್ರ ವಿನೋದ್ ಕುಮಾರ್ ಬೋವಿ 582 ಅಂಕಗಳು ಹಾಲ್ ಟಿಕೆಟ್ ನಂಬರ್ 20249324132, ಸಂಗಮೇಶ ಬಾರಿಕೆರ 582 ಅಂಕೆಗಳು ಹಾಲ್ ಟಿಕೆಟ್ ನಂಬರ್ 20249324217, ಕೆ ಸುರೇಖಾ 582 ಅಂಕಗಳು ಹಾಲ್ ಟಿಕೆಟ್ ನಂಬರ್ 20 249241519, ಸ್ಫೂರ್ತಿ 582 ಅಂಕಗಳು ಹಾಲ್ ಟಿಕೆಟ್ ನಂಬರ್ 20249242009, ಶ್ರೀ ಲಕ್ಷ್ಮಿ 581 ಅಂಕಗಳು ಹಾಲ್ ಟಿಕೆಟ್ ನಂಬರ್ 20249241513, ಸೌಭಾಗ್ಯ ಗೌರಿ 580 ಅಂಕಗಳು ಹಾಲ್ ಟಿಕೆಟ್ ನಂಬರ್20249324272, ಮಹಮ್ಮದ್ ಸಲ್ಮಾನ್ 580 ಅಂಕಗಳು ಹಾಲ್ ಟಿಕೆಟ್ ನಂಬರ್20249241620, ಅಮನ್ ಕುಮಾರ್ ಸಿಂಗ್ 580 ಅಂಕಗಳು ಹಾಲ್ ಟಿಕೆಟ್ ನಂಬರ್ 20249244422, ಈ ರೀತಿಯಾಗಿ ಅಂಕಗಳನ್ನು ಗಳಿಸಿ ಕಾಲೇಜಿಗೆ ಕೀರ್ತಿಯನ್ನು ತಂದಿದ್ದಾರೆ. ಇವರನ್ನು ಹಾಗೂ ಇತರೆ ವಿದ್ಯಾರ್ಥಿಗಳನ್ನು ಈ ವಿದ್ಯಾಸಂಸ್ಥೆಯ ನರ್ದೇಶಕರಾದ ಡಾಕ್ಟರ್ ಬಿ ರಾಧಾಕೃಳ್ಣ ರವರು ಮತ್ತು ಕಾಲೇಜಿನ ಸಿಬ್ಬಂದಿ ಅಭಿನಂದನೆಗಳನ್ನು ಸಲ್ಲಿಸಿದ್ದಾರೆ.

# ಅಂಬೇಡ್ಕರ್ ಸಂವಿಧಾನದಿಂದ ತಳ ಸಮುದಾಯದ ಅಭಿವೃದ್ಧಿ ಸಾಧ್ಯ–ಮೀನಹಳ್ಳಿ ತಾಯಣ್ಣ

ಬಳ್ಳಾರಿ ಏ : ಅಂಬೇಡ್ಕರ್ ಅವರು ತಳಮಟ್ಟದ ಸಮುದಾಯಕ್ಕೆ ನಮಗೆ ನ್ಯಾಯ ಕೊಟ್ಟ ದೇವರಿದ್ದಂತೆ ಅವರು ರಚಿಸಿದ ಸಂವಿಧಾನ ಕೆಳ ಸಮುದಾಯಕ್ಕೆ ನೀಡಿದ ಮೀಸಲಾತಿಯಿಂದ ರಾಜಕೀಯವಾಗಿ ಆರ್ಥಿಕವಾಗಿ ಸಮಾಜಿಕವಾಗಿ ಅಭಿವೃದ್ಧಿ ಹೊಂದಲು ಸಾಧ್ಯವಾಗಿದೆ ಎಂದು ಜೆ ಡಿ ಎಸ್ ಜಿಲ್ಲಾಅಧ್ಯಕ್ಷ ಮಿನಹಳ್ಳಿ ತಾಯಣ್ಣ ಹೇಳಿದರು.

ಅವರು ನಗರದ ಕೆಸಿ ರಸ್ತೆಯಲ್ಲಿರುವ ಜೆ ಡಿ ಎಸ್ ಮುಖ್ಯ ಕಚೇರಿ ಯಲ್ಲಿ 133ನೇ ಅಂಬೇಡ್ಕರ್ ಜಯಂತಿ ಪ್ರಯುಕ್ತ ಅವರ ಭಾವಚಿತ್ರಕ್ಕೆ ಪುಳ್ಪ ನಮನ ಸಲ್ಲಿಸಿದರು ಈ ಸಂದರ್ಭದಲ್ಲಿ ಜೆಡಿಎಸ್ ಎಸ್ಸಿ ಘಟಕದ ಜಿಲ್ಲಾಧ್ಯಕ್ಷ ಸಂಗನಕಲ್ಲು ಪ್ರಸಾದ್,

ಅಂಬೇಡ್ಕರ್ ಜಯಂತಿ ಪ್ರಯುಕ್ತ ಅವರ ಭಾವಚಿತ್ರಕ್ಕೆ ಪುಳ್ಪ ನಮನ ಸಲ್ಲಿಸಿದರು ಈ ಸಂದರ್ಭದಲ್ಲಿ ಜೆಡಿಎಸ್ ಎಸ್ಸಿ ಘಟಕದ ಜಿಲ್ಲಾಧ್ಯಕ್ಷ ಸಂಗನಕಲ್ಲು ಪ್ರಸಾದ್, ನಗರಧ್ಯಕ್ಷರಾದ ವಂಡ್ರಿ ಪದಾಧಿಕಾರಿಗಳಾದ ಕಿರಣ್ ಮತ್ತು ರೂಮನ ,ನಾಗಮಣಿ, ನೀಲಾ, ಅಜ್ಮಿರ, ಬೇಗಂ, ಬದ್ರಿ ಸೇರಿದಂತೆ ಅನೇಕರಿದ್ದರು.

